Regd No B G. 155

Sri

17—10—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಕೆದಾರ್ ಎಂ ವಿ. ಸುಬ್ಬರಾಯರು [2 ನಯೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ಕಂಸ ಶಾಸನ

ಓಂ ಶ್ರೀಮನ್ನಾರಾಯಣಾಯನಮಃ ಎನ್ನುವುದನ್ನು ಬಿಡಲಾರೆನೆಂದ ಪುಟ್ಟ ಪ್ರಹ್ಲಾದ ಪರಿಪರಿಯ ಕಷ್ಟಗಳನ್ನು ಅನುಭವಿಸಜೇಕಾಯಿತು : ಆದರೂ ಅವನು ತನ್ನ ದೈನೀಕ ಗುಣವನ್ನು ಬಿಟ್ಟುಬಿಡಲಿಲ್ಲ : ಆದುದರಿಂದಲೇ ಅತನನ್ನು ಪರಮಭಕ್ತನೆನ್ನಲಾಗುತ್ತಿದೆ

ಬಾಲಕೃಷ್ಣನಿಗೆ ಜಯವಾಗಲಿ, ಗೋಪಾಲಕೃಷ್ಣನಿಗೆ ಜಯವಾಗಲಿ ಎಂದು ಹೇಳಿದ ನಾಲಿಗೆಗಳನ್ನೇ ಕಂಸನು ಕತ್ತರಿಸಿ ಹಾಕಿದನು.

ಗೊಲ್ಲಂವನಿಗೇತಾ ಮಂತ್ಯಾದೆ ಎಂದು ಶ್ರೀ ಕೃಷ್ಣನನ್ನು ಶಿಶುಪಾಲನು ಮೂದಲಿಸಿದನು.

ಇವು ಘಟನೆಗಳ ಕೆಲ ಉದಾಹರಣೆಗಳು : ಈ ಘಟನೆಗಳ ಅಂತ್ಯವಾದರೂ ಹೇಗಾಯಿತು ?

ಕೆಲ ದಿನಗಳ ಹಿಂದೆ ಮೊಂಘೀರಿನಲ್ಲಿ ಒಂದು ಘಟನೆ ನಡೆಯಿತು ; ಶ್ರೀ ಬಂಧು ಯಾದವರು ಅಲ್ಲಿಯ ನ್ಯಾಯಾಸ್ಥಾನಕ್ಕೆ ಕಟ್ಟೆಯೊಂದರ ಸಂಬಂಧವಾಗಿ ಹೋಗಿದ್ದರು : ಕಟ್ಟೆಯಲ್ಲಿ ಅವರು ಗೆದ್ದರು ; ನ್ಯಾಯಾಧೀಶರು ತೀರ್ಪಿತ್ತೊಡನೆ ಅನಂದದಿಂದ ಶ್ರೀ ಬಂಧು ಯಾದವರು ' ಶ್ರೀಕೃಷ್ಣ ಭಗವಾನನಿಗೆ ಜಯ ' ಎಂದರು : ನ್ಯಾಯಾಧೀಶರಿಗೆ ಕೋಪ ಬಂತು : ಅವರು ಶ್ರೀ ಬಂಧು ಮಾಧವರಿಗೆ ನೂರು ರೂಪಾಯಿ ದಂಡ ಹಾಕಿದರು : ನಿಂತ ಕಾಲು ಮೇಲೆ ಅದೆಂತು ದಂಡ ತೆರುವುದು ? ಅವನ್ನು ಜಾವೀನು ಮೇಲೆ ಬಿಡಲು ಕೇಳಿಕೊಳ್ಳಲಾಯಿತು ; ನ್ಯಾಯಾಧೀಶರು ಒಪ್ಪಲಿಲ್ಲ : ದಂಡ ತೆತ್ತು ಮರುದಿನ ಅವನ್ನು ಬಿಡಿಸಿಕೊಂಡು ಹೋಗಬೇಕಾಯಿತೆಂದು ' ಸನ್ಮಾರ್ಗ ' ಹಿಂದಿ ದೈನಿಕ ಪ್ರಕಟಿಸಿರುತ್ತದೆ.

ಈ ನ್ಯಾಯಾಧೀಶರಾದರೂ ಯಾರು ? ಅವರು ಹಿಂದೂವೇ ಇದ್ದಾರೆ ; ನ್ಯಾಯಾಲಯದೊಳಗೆ ನ್ಯಾಯಾಧೀಶರೆದುರಿನಲ್ಲಿ ಭಗವಾನ್ ಶ್ರೀಕೃಷ್ಣನಿಗೆ ಜಯ ವಾಗಲಿಲೆಂದು ಹೇಳಿರುವುದೇ ಶ್ರೀ ಬಂಧು ಯಾದವರು ಮಾಡಿದ ಮಹಾಪರಾಧ !

ಲಂಸ್ಯೆಯ ಕೊನೆಯಲ್ಲಿ ನಿಂತುಕೊಂಡು ' ಪಾಪಿಗಳೇ ನೋಡಿರಿ ' ಎಂದು ಹೇಳುತ್ತಾ, ಶ್ರೀ ಕೃಷ್ಣನ ಚಿತ್ರವನ್ನು ಹರಿಯುವರಿದ್ದಾರೆನ್ನುವದು ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ ; ಶ್ರೀ ಕೃಷ್ಣನಮುದಿಂಗಳನ್ನು ನಾಶಗೈಯುವವರಿದ್ದಾರೆ, ಕೊಳ್ಳೆಹೊಡಿಯುವವರಿದ್ದಾರೆನ್ನುವದನ್ನು ಹರಿತ್ರಿ ಸಾರುತ್ತಿದೆ ; ಇಂದೂ ಜನ್ಮಾಷ್ಟಮಿಯ ದಿನ ಶ್ರೀಕೃಷ್ಣನ ಚಿತ್ರಸಹಿತ ಮೆರವಣಿಗೆ ಹೋಗುವಾಗ ಕೆಲವೆಡೆಗಳಲ್ಲಿ ಅದರ ಮೇಲೆ ಧಾಳಿಮಾಡಲವರಿದ್ದಾರೆ : ಇವೆಲ್ಲವನ್ನೂ ನಾವು ನಮ್ಮ ನಿತ್ಯ ಜೀವನದಲ್ಲಿ ನೋಡಬಹುದು : ಆದರೆ ಅವರೆಲ್ಲರನ್ನೂ ನ್ಯಾಯಾಲಯ ಖಂಡಿಸಿ ಬಿಡುತ್ತದೆ ; ಶ್ರೀ ಕೃಷ್ಣನ ಭಾವಚಿತ್ರಗಳನ್ನು ' ಪಾಪಿಗಳೇ ನೋಡಿರಿ ' ಎಂದು ಹರಿದುಹಾಕುವುದು ಅವರ ಮಕ್ಕೆ ಸಂಬಂಧಪಟ್ಟ ವಿಷಯವಾಗುತ್ತದಂತೆ ! ಅಂತೆಯೇ ಮೆರವಣಿಗೆಯಲ್ಲಿ ಹೋಗುತ್ತಿರುವವರು ಬೇಕೆಂದೇ ಲಂಸ್ಯೆಯಲ್ಲಿ ಹೋಗುತ್ತಾರಂತೆ ! ಅವರೇ ಮೊದಲು ಗಲಭೆ ಸಡೆಸಿದರಂತೆ ! ಒಮ್ಮೆ ಕದ್ದು ಹೋದ ವಿಗ್ರಹಗಳು ನಂತರ ಸಿಕ್ಕಿದ ಸುದ್ದಿ ಇದುವರೆಗೆ ಪ್ರಕಟವಾಗಿರುವುದಿಲ್ಲ ; ಸಂಕಾರ ಇದೆಲ್ಲವನ್ನೂ ಸಹಿಸುತ್ತದೆ ; ಸಂಕಾರಕ್ಕೆ ಬೆದರಿ ಜನತೆ ಅದನ್ನು ಸಂಗುತ್ತಿದೆ ; ಅವರು ಅನ್ಯಮತೀಯರಾಗಿರುವದರಿಂದ ಅವೆಲ್ಲವನ್ನೂ ಸಹಿಸಿಕೊಳ್ಳಬೇಕೆಂದು ಉಪದೇಶ ಮಾಡಲಾಗುತ್ತಿದೆ ; ಅವರೆಲ್ಲರೂ ಶ್ರೀಕೃಷ್ಣನ ಆರಾಧಕರಲ್ಲವಾದುದರಿಂದ ಹೀಗೆ ಮಾಡುತ್ತಿರಬಹುದು.

ಈಗಲೇ ಇಂತಹ ಕಂಸಶಾಸನದ ಇತಿಶ್ರೀಗೆ ಶ್ರೀಕೃಷ್ಣನಾರಾಧಕರೊಂದಾಗಬೇಕಾಗಿದೆ; ಕಂಸಶಾಸನ ಕೊನೆಗೊಳ್ಳಲಿ.

— ಶಿವಶಂಕರ

ವೈಭವ ಜಂಬೂಸವಾರಿ

ಮೈಸೂರು 16— ವಿಶ್ವವಿಖ್ಯಾತವಾದ ನವರಾತ್ರಿ ಕಡೇದಿನವಾದ ಇಂದು ಶ್ರೀಮನ್ಮಹಾರಾಜರವರ ದಸರಾ ವೈಭವಗಳಿಗೆ, ಬನ್ನೀಮಂಟಪಕ್ಕೆ ಹೋಗಿಬರುವ ಜಂಬೂಸವಾರಿಯು ಬಹು ವೈಭವವಾಗಿ ನೆರವೇರಿತು ; ಸುಮಾರು 2 ಲಕ್ಷ ಜನರು ನೋಡಿ ಹರ್ಷಗೊಂಡರು

★

ಅಕ್ಕಿ ಗೋಧಿಗೆ ಕಾರ್ಡು

ಬೆಂಗಳೂರು— ಬೆಂಗಳೂರು ನಗರದಲ್ಲಿ ಅಕ್ಕಿ ಗೋಧಿ ಪಡೆಯಲು ಕಾರ್ಡುಗಳನ್ನು ನವೆಂಬರು 1 ರಿಂದ ಜಾರಿಗೆ ತರಲಾಗುವುದು

★

ತೆರಿಗೆಗಳು

ನವದೆಹಲಿ— ನಾಲ್ಕನೇ ಯೋಜನೆಯಲ್ಲಿ ಕೆಲವು ತೆರಿಗೆಗಳು ಸೂಚಿಸಲಾಗಿದೆಯೆಂದು ಹೇಳಲಾಗಿದೆ

★

ಸಮಿತಿ ನೇಮಕ

ನವದೆಹಲಿ— ಹೋಟಲುಗಳಲ್ಲಿ ತಿಂಡಿ ಪಾನೀಯ ಬೆಲೆಯನ್ನು ಒಂದೇ ರೀತಿ ಇಡುವ ಅವಶ್ಯಕತೆ ಕಂಡುಬಂದಿದ್ದು, ಈ ಬಗ್ಗೆ ನಿರ್ಧರಿಸಲು ಒಂದು ಸಮಿತಿ ನೇಮಕ ಮಾಡಲಾಗುವುದೆಂದು ತಿಳಿಯಬಂದಿದೆ.

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನ ಮಹಾವಿದ್ವಾನ್. ಧರ್ಮಾಧಿಕಾರಿ ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ
18 ಭಾನುವಾರ ದ್ವಾದಶಿ ಪೂರ್ವಾಭಾದ್ರ

—

ಸೋಮವಾರ ಶ್ರೀ ಚಾಮುಂಡೇಶ್ವರಿ ಅಂಭೋತ್ಸವ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ.

ಬ್ರಿಟನ್ನಿನಲ್ಲಿ ಲೇಬರ್ ಸರ್ಕಾರ

ಲಂಡನ್ 16— ಸಾರ್ವಜನಿಕ ಚುನಾವಣೆಯಲ್ಲಿ ಬ್ರಿಟನ್ನಿನ ಲೇಬರು ಪಾರ್ಟಿ ವಿಜಯಗಳಿಸಿಕೊಂಡಿತು ; ಅದರ ನಾಯಕ ಹೆರಾಲ್ಡ್ ವಿಲ್ಸನ್ನರನ್ನು ಮಂತ್ರಿಮಂಡಲ ಸ್ಥಾಪಿಸಲು ಕರೆಯಿತ್ತರು ; ಅವರು ಸಮ್ಮತಿಸಿದರು

★

ರಷ್ಯಾದಲ್ಲಿ

ಮಾಸ್ಕೊ— ಕೃಶ್ಚೇವರು ವೃದ್ಧಾಪ್ಯ ಮತ್ತು ಅನಾರೋಗ್ಯ ನಿಮಿತ್ತ ತಮ್ಮ ಪ್ರಧಾನ ಪದವಿಯಿಂದ ಹೊರಬಂದರು — ಪ್ರಥಮ ಉಪಪ್ರಧಾನಿ ಬ್ರಜನೇನರು ಪ್ರಧಾನಿಯಾಗಿ ನಿಯಮಿಸಲ್ಪಟ್ಟರು.

★

ಬೊಂಬಾಯಿ— ಬುಲಿಯನ್ ವಾರಕಟ್ಟೆಯ ಹತ್ತಿರ ಒಂದು ದೊಡ್ಡ ಕಟ್ಟಡದಲ್ಲಿ ರೂ 520000 ಬೆಲೆಬಾಳುವ 46650 ಗ್ರಾಂ ಚಿನ್ನವನ್ನು ಕಸ್ಟಂಸಿನವರು ವಶಪಡಿಸಿಕೊಂಡರು

★

ಅಣು ಶಕ್ತಿಗಳು

ಪೀಕಿಂಗು— ತಾನು ಯಶಸ್ವಿಯಾಗಿ ತನ್ನ ಪ್ರಥಮ ಪರಮಾಣು ಬಾಂಬನ್ನು ಸ್ಫೋಟ ಮಾಡಿದುದಾಗಿ ಚೀನಾ ಪ್ರಕಟಿಸಿದೆ ; ವಾಯುಮಂಡಲದಲ್ಲೆ ಅಥವಾ ಭೂಗರ್ಭದಲ್ಲೇ ಹೊಂಪಟ್ಟಿಲ್ಲ : ಚೀನವು ೫ನೇ ಅಣು-ಶಕ್ತಿಯಾಯಿತು ; ಯು ಕ್ಯಾವು ಅಮೇರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸು

★

ಶೇಷನಿಗ್

ಬೆಂಗಳೂರು— ದೇಶದಲ್ಲಿ ಶೆ ಪರಿಗು ಕಟ್ಟಕಡೆಯ ಮಾರ್ಗವಾಗಿ ಜಾರಿಗೆ ತರಲಾಗುವುದೆಂದು ಭಾರತ ಅಧಿಕಾರಿಗಳು ಹೇಳಿದರು

ಕವಿ ಸಮ್ಮೇಳನ

ಮೈಸೂರು 16— ದಸರಾ ಉತ್ಸವಗಳ ಸಂಬಂಧವಾಗಿ ಇಲ್ಲಿ ಇಂದು ಬೆಳಿಗ್ಗೆ ಕಾಲೇಜಿನಲ್ಲಿ ನಡೆದ ಕವಿ ಸಮ್ಮೇಳನದಲ್ಲಿ ವಿವಿಧ ಭಾರತದ ಭಾಷೆಗಳ 12 ಮಂದಿ ಕವಿಗಳು ಭಾಗವಹಿಸಿದ್ದರು : ಶ್ರೀ ಸಿದ್ದಯ್ಯ ಪುರಾಣೀಕರು ಅಧ್ಯಕ್ಷತೆ ವಹಿಸಿದ್ದರು ; ಶ್ರೀ ಧಾರವಾಡಕರರು ಸಮ್ಮೇಳನ ಉದ್ಘಾಟಿಸಿದರು

★

ಕಲಾವಿದರಿಗೆ ಸನ್ಮಾನ

ಮೈಸೂರು — ವಿವಿಧ ಕಲೆಯನ್ನು ಪ್ರತಿನಿಧಿಸಿದ 7 ಮಂದಿ ಕಲಾವಿದರಿಗೆ ಸರಕಾರವು ಪ್ರಶಸ್ತಿಯಿತ್ತು ಸನ್ಮಾನಿಸಿತು : ಭಾರತದ ಉಪರಾಷ್ಟ್ರಪತಿ ಶ್ರೀ ಸುಬ್ರಹ್ಮಣ್ಯ ಪ್ರಶಸ್ತಿಗಳನ್ನಿತ್ತು ಅಭಿನಂದಿಸಿದರು.

★

ಅಪಾಯಕಾರಿಗಳು

ಗುಲ್ಬರ್ಗ— ಆಚಾರ ವಿಚಾರ್ಯಾನುಷ್ಠಾನದವರು ಪಂಚಮದಳದವರಿಗಿಂತ ಹೆಚ್ಚು ಅಪಾಯಕಾರಿಗಳೆಂದು ಏಂ ಪಿ ಸಿ ಸಿ ಅಧ್ಯಕ್ಷ ಮಮಜಾಲಿಯವರು ಹೇಳಿದರು.

ಮಹಾತ್ಮಾ ಗಾಂಧಿಯವರ ಅಮೋಘ ನುಡಿಗಳು

ಆದರ್ಶ ರಾಷ್ಟ್ರದಲ್ಲಿ ವೈದ್ಯರು, ವಕೀಲರೇ ಮೊದಲಾದವರು ಸಮಾಜದ ಒಳಿತಿಗಾಗಿ ಕೆಲಸಮಾಡಬೇಕು, ಶಮನಕ್ಕಾಗಿ ಅಲ್ಲ.

ಈ ದಿನದ ಕುರಿತು ನಿಮ್ಮ ಎಚ್ಚರಿಕೆ ವಹಿಸಿದರೆ, ನಾಳೆಯ ಕುರಿತು ಎಚ್ಚರಿಕೆಯನ್ನು ದೇವರೇ ವಹಿಸಿಕೊಳ್ಳುವನು.

ಕೆಲಸ ಅಥವಾ ಆಹಾರವಿಲ್ಲದ ಒಬ್ಬನೇ ಒಬ್ಬ ಗಂಡಸು ಯಾ ಹೆಂಗಸು ಉಳಿದಿರುವ ತನಕ ನಾನು ಆರಾಮವಾಗಿರಲು ಅಥವಾ ಒಂದೂಟವನ್ನಾದರೂ ಮಾಡಲು ನಾಚಬೇಕು.

ದಿನಕ್ಕೆ ಒಂದೇ ಊಟದಲ್ಲಿ ತೃಪ್ತಿಪಟ್ಟುಕೊಂಡಿರಬೇಕಾದಂಥ ಜನರು ಭಾರತದಲ್ಲಿ ಕೋಟಿಗಟ್ಟಲೆ ಇದ್ದಾರೆ ; ಆ ಊಟವಾದರೂ- ತುಪ್ಪವಿಲ್ಲದ ಒಂದು ಚಪಾತಿ - ಒಂದು ಚಟಿಕೆ ಉಪ್ಪು ಮಾತ್ರ.

ದಸರಾ ಮನರಂಜನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ೨

ತಾ || 18 ರಂದು ಎಗ್ಮಿಬಿಷನ್ನಿನಲ್ಲಿ ಸಂಜೆ 6 ರಿಂದ ನಾಗಸ್ವರ. ನೃತ್ಯ.

ಗೋಂಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಚಂದಾ ವಾಯಿದೆ ಮುಗಿದಿರುವವರು ದಯವಾಡಿ ಪಾವತಿ ಮಾಡಬೇಕಾಗಿ ವಿನಂತಿ ; ಅಭಿಮಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ನೆರವು ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವರ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಕನ್ನಡನಾಡಿನಲ್ಲಿ ಗೋಂಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ಗೋಂಕ್ಷಣಕ್ಕೆ ಲೇಖನಗಳು, ಚಂದಾ ಸಹಾಯದ್ರವ್ಯಗಳನ್ನೂ ಸ್ವೀಕರಿಸಲಾಗುತ್ತೆ, ಸಹಾಯಕರ ಹೆಸರನ್ನು ಪತ್ರಿಕೆಯಲ್ಲಿ ಕೃತಜ್ಞತಾಪೂರ್ವಕ ಪ್ರಕಟಿಸಲಾಗುತ್ತೆ.

ರೂ. 10 ಕ್ಕೆ ಮೇಲ್ಪಟ್ಟು ಕೊಟ್ಟವರಿಗೆ 'ಗೋರಕ್ಷಣ' ಕಳುಹಿಸಲಾಗುತ್ತಿರುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ವುಡ್‌ಲಾಂಡ್ ಅಮೋಘ 6 ನೇ ವಾರ

ಶಿ ಸು

.... ಎ. ವಿ. ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ— ಅಶೋಕಕುಮಾರ್, ಮಾಲಾ ಸಿನ್ಹಾ, ನಿಮ್ಮಿ, ಧರ್ಮೇಂದರ್, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಆಪೆರಾ— ಜಯಪ್ರದ 2 ನೇ ವಾರ

ಸುಂದರ ತಮಿಳು ಚಿತ್ರ [ದಿನ 3 ಆಟಗಳು]

ವೀರಾಂಗನೆ

ಪಾತ್ರ— ಜೆಮಿನಿ ಗಣೇಶ್, ಪದ್ಮಿನಿ, ರಾಗಿಣಿ, ಬಾಲಾಜಿ, ಸುಕುಮಾರಿ, ಅಶೋಕ್

ರಣಜಿತ್‌ನಲ್ಲಿ— ಜನಪ್ರಿಯ 3 ನೇ ವಾರ

— ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ ೯

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಕಲಾಕೃತಿ

ಮುರಿಯದ ಮನೆ [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು

ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI SUDHA

Superb Tonic

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ವಾರ್ಷಿಕ ಚಂದಾ 50 ನ ಪೈ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram. Mysore 4